# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 159 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.12.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 159 • PRGI No:KARKAN/2023/88055 • VIJAYANAGARA • 25.12.2024 • Wednesday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper


# ಹೊಸ ವರ್ಷದ ಹಾರ್ದಿಕ ಶುಭಾಶಯಗಳು

ಹೊಸ ವರ್ಷದ
ಹೊಸ ಸವಾಲುಗಳನ್ನು
ಸ್ವೀಕರಿಸಿ,
ಹೊಸ ಯಶಸ್ಸಿನತ್ತ
ಹೆಜ್ಜೆ ಇಡಿ!




## PUBLIC HOLIDAYS 2025

| | |
|---|---|
| 14 Jan Tue | Makara Sankranti |
| 26 Jan Sun | Republic Day |
| 26 Feb Wed | Maha Shivaratri |
| 30 Mar Sun | Ugadi |
| 31 Mar Mon | Idul Fitr |
| 10 Apr Thu | Mahavir Jayanti |
| 14 Apr Mon | Dr Ambedkar Jayanti |
| 18 Apr Fri | Good Friday |
| 30 Apr Wed | Basava Jayanti |
| 01 May | Thu May Day |
| 07 Jun Sat | Bakrid / Eid al Adha |
| 06 Jul Sun | Muharram |
| 15 Aug Fri | Independence Day |
| 27 Aug Wed | Ganesh Chaturthi |
| 05 Sep Fri | Eid e Milad |
| 21 Sep Sun | Mahalaya Amavasye |
| 01 Oct Wed | Maha Navami |
| 02 Oct Thu | Vijaya Dashami |
| 02 Oct Thu | Gandhi Jayanti |
| 07 Oct Tue | Maharishi Valmiki Jayanti |
| 20 Oct Mon | Diwali |
| 21 Oct Tue | Deepavali Holiday |
| 01 Nov Sat | Kannada Rajyothsava |
| 08 Nov Sat | Kanakadasa Jayanti |
| 25 Dec Thu | Christmas Day |

# 2025

### JANUARY 2025

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### FEBRUARY 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

### MARCH 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

### APRIL 2025

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

### MAY 2025

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

### JUNE 2025

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

### JULY 2025

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### AUGUST 2025

| S | M | T | W | T | F | S |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

### SEPTEMBER 2025

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

### OCTOBER 2025

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### NOVEMBER 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | | | | | | |

### DECEMBER 2025

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

# ಸ್ಟುಡೆಂಟ್ ಕಾಲಂ

## ಮೈಸೂರು ಪ್ರವಾಸನುಭವ



ನಮ್ಮ ಹಿರಿಯರು ಹೇಳಿರುವ ಒಂದು ಮಾತು ಎಲ್ಲರ ಮನದಲ್ಲಿ ಉಳಿಯುವಂತಹದ್ದು,ಅದೇಂದರೆ "ದೇಶ ಸುತ್ತಿ ನೋಡು, ಕೋಶ ಓದಿ ನೋಡು" ಎನ್ನುವದು. ಈ ಗಾದೆ ಮಾತಿಗೆ ಔಚಿತ್ಯಪೂರ್ಣ ವೆಂಬಂತೆ ಶಿಕ್ಷಕರು ಶಾಲಾ ವತಿಯಿಂದ ಪ್ರವಾಸ ಕೈಗೊಳ್ಳುತ್ತಿದ್ದಾರೆ ಎಂಬ ಸುದ್ದಿ ಆ ದಿನಪೂರ್ತಿ ಮನವನ್ನು ಕಲಕಿ ಆ ದಿನದ ಸಮೀಪಕ್ಕೆ ಒಂಟಿ ಕಾಲಲ್ಲಿ ನಿಂತು ಕಾಯುವಂತಾಗಿತ್ತು. ಆ ದಿನ ನಮ್ಮೆದುರಿಗೆ ಬಂದಾಗ ನಮ್ಮೆಲ್ಲಾ ಸ್ನೇಹಿತರು ಖುಷಿಯಿಂದ ಶಿಕ್ಷಕರ ಅಣತಿಯಂತೆ ಲವಲವಿಕೆಯಿಂದ ಸಾಗಿದೆವು. ನಾವು ಮೊದಲಿಗೆ ಸಾಗುವ ಮಾರ್ಗದಲ್ಲಿದ್ದ ದೇವಸ್ಥಾನಗಳ ದರ್ಶನ ಪಡೆದು ಅಲ್ಲಿಯೇ ಬೆಳಗಿನ ಉಪಹಾರ ಸೇವಿಸಿ, ಮುಂದೆ ನಮ್ಮ ಪ್ರಯಾಣ ಬೆಳಸಿ ಮರುದಿನ ಬೆಳಿಗ್ಗೆ ನಾಡದೇವತೆಯಾದ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು ಮೈಸೂರು ಅರಮನೆಗೆ ತೆರಳಿ ರಾಜರು ಬಳಸುತ್ತಿದ್ದ ವಸ್ತುಗಳು, ಕೆಲವು ರಾಜರ ಭಾವಚಿತ್ರಗಳನ್ನು ಕಂಡು ಮನ ಹಿಗ್ಗಿತು. ಯಾವಾಗಲೂ ಮೊಬೈಲ ಗಳಲ್ಲಿ ಮಾತ್ರ ನೋಡುತ್ತಿದ್ದ ಪ್ರಾಣಿ ಪಕ್ಷಿಗಳನ್ನು ಪ್ರಾಣಿ ಸಂಗ್ರಾಲಯದಲ್ಲಿ ಕಂಡೆನು. ಹೀಗೆ ದಾರಿಯುದ್ದಕ್ಕೂ ಹಲವನ್ನು ನೋಡಿ ಸರ್ವರೂ ಸಂತೋಷಗೊಂಡು ಕುಣಿದು ಕುಪ್ಪಳಿಸಿದೆವು. ಇಂತಹ ಶೈಕ್ಷಣಿಕ ಪ್ರವಾಸವು ನೈಜ ಅನುಭವವನ್ನು ನಮಗೆ ಕಟ್ಟಿಕೊಡುವುದರ ಜೊತೆಗೆ ಸಾಂಸ್ಕೃತಿಕ ವಿನಿಮಯವನ್ನು ನಮ್ಮ ಬದುಕಿಗೆ ಒದಗಿಸುತ್ತದೆ. ಸಹಾಯ ಸಹಕಾರ ಮನೋಭಾವವನ್ನು ಕಂಡುಕೊಳ್ಳುತ್ತೇವೆ. ಪ್ರಾಣಿ ಸಂಗ್ರಾಲಯದಲ್ಲಿ ವಿಪರೀತ ಸುತ್ತಿದ ಪರಿಣಾಮ ಹೊರಗಡೆ ಬಂದಾಗ ಹಸಿವು ಹೆಚಾಗಿತ್ತು ಸ್ನೇಹಿತರು ತಂದಿದ್ದ ಚಕ್ಕಲಿಗಳನ್ನು ಕೊಟ್ಟರು ನಾನು ತಗೆದುಕೊಡು ಹೋಗಿದ್ದ ಖಾದ್ಯಗಳನ್ನು ಹಂಚಿದೆ. ಕೆಲವು ಸ್ನೇಹಿತರು ಹಲ್ಲುಜ್ಜಲು ಪೇಸ್ಟ್‌ತರಲು ಮರೆತು ಬಂದವರಿಗೆ ಸಹಕರಿಸಿದೆವು. ಪರಸ್ಪರ ಒಬ್ಬರಿಗೊಬ್ಬರು ಅನೋನ್ಯತೆಯಿಂದ ಬದುಕುವ ಸಹಾಯ ಸಹಕಾರ ಮಾಡುವ ಮನೋಭಾವನೆ ನಮ್ಮಲ್ಲಿ ಈ ಪ್ರವಾಸ ನೈಜ ಅನುಭವ ಕಟ್ಟಿಕೊಡುವ ಕಾರ್ಯ ಮಾಡಿತು. ಇತಿಹಾಸ ಪ್ರಸಿದ್ಧ ಸೋಮನಾಥಪುರದ ಕೇಶವ ದೇವಸ್ಥಾನದ ವಾಸ್ತುಶಿಲ್ಪ ಶೈಲಿಯೂ ನಮ್ಮ ಹಿರಿಯರ ಕೆತ್ತನೆಯ ಕಲೆಯನ್ನು ಸಾಕ್ಷಿ ಸಹಿತ ಒದಗಿಸುತ್ತದೆ. ಅಜ್ಜನ ಕಾಲದಿಂದ ಪ್ರಾರಂಭವಾಗಿ



ಮೊಮ್ಮಗನ ಕಾಲಕ್ಕೆ ಅಂತ್ಯ ಕಾಣುವ ಈ ದೇವಸ್ಥಾನ ಸುಮಾರು 800 ವರ್ಷಗಳ ಇತಿಹಾಸವನ್ನು ತಿಳಿಸುತ್ತದೆ. ಪ್ರಾಕೃತಿಕ ವಿಕೋಪಗಳಿಗೂ ಮಾನವನ ಅಟ್ಟಹಾಸಕ್ಕೂ ಕುಗ್ಗದೆ ತನ್ನ ಗುಣಮಟ್ಟವನ್ನು ಕಾಪಿಟ್ಟುಕೊಂಡಿರುವುದು ಅಂದಿನವರಲ್ಲಿನ ಶ್ರದ್ಧೆ ಮತ್ತು ಪ್ರಾಮಾಣಿಕತೆಗೆ ಅವರು ರೂಪಿಸಿರುವ ಯೋಜನೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದಣಿಸಿತು. ಇದನ್ನೆ ನಮ್ಮ ಪ್ರಯಾಣದುದ್ದಕ್ಕೂ ಚರ್ಚಿಸಿದೆವು. ಇದರ ಜೊತೆಗೆ ಶಿಕ್ಷಕರು ಮಾಡುತ್ತಿದ್ದ ಮಾರ್ಗದರ್ಶನ ನಮ್ಮ ಜ್ಞಾನ ದಾಹಕ್ಕೆ ನೀರು ಒದಗಿಸಿದಂತಾಗುತ್ತಿತ್ತು.

ಈ ಸಮಯ ಪ್ರವಾಸಕ್ಕೊಂದು ಪರ್ವಕಾಲ ಅನೇಕ ವಿಷಯಗಳನ್ನು ಕಲಿಯುತೇವೆ ಎಂಬುದು ಎಷ್ಟು ಸತ್ಯವೋ ನಾವುಗಳು ಹೋದೆಲೆಲ್ಲಾ ಜಾಗೂರುಕತೆ ವಹಿಸುವುದು ಸಹ ಅಷ್ಟೇ ಮುಖ್ಯವಾಗಿರುತ್ತದೆ. ಸ್ನೇಹಿತರ ಗುಂಪಿನಿಂದ ಯಾವುದೇ ಕಾರಣಕ್ಕೂ ಚದುರಿ ಹೋಗಬಾರದು. ನಮಗೆ ಯಾವುದಾದರೂ ವಸ್ತುವಿನ ಮೇಲೆ ಆಕರ್ಷಣೆಯಾಗಿ ಅದನ್ನ ಖರೀದಿಸಲು ತೆರಳಬಾರದು. ಸದಾ ಶಿಕ್ಷಕರ ಮಾರ್ಗದರ್ಶನವನ್ನೇ ಅನುಪಾಲನೆ ಮಾಡುತ್ತಿರಬೇಕು. ಪ್ರಯಾಣ ಮದ್ಯದಲ್ಲಿ ನಮಗೆನಾದರೂ ವಾಂತಿ, ಬೇದಿ, ಹಸಿವು, ಮೂತ್ರ ಬಾದೆಗಳು ಕಾಡಿದರೆ ಸಂಕೋಚವಿಲ್ಲದೆ ಶಿಕ್ಷಕರ ಬಳಿಗೆ ತಿಳಿಸುವ ಕೆಲಸ ಮಾಡಬೇಕು. ಬಾಲ್ಯದಲ್ಲಿ ಕೈಗೊಂಡ ಈ ಪ್ರವಾಸದ ಅನುಭವ ಬದುಕಿನಲ್ಲಿ ಅಜರಾಮರವಾಗಿ ಉಳಿಯುತ್ತದೆ. ಹಂಚಿ ತಿನ್ನುವ ತಿಳುವಳಿಕೆಯನ್ನ ಜೀವನಕ್ಕೆ ಕಟ್ಟಿಕೊಡುತ್ತದೆ.

– ಎ ಕೆ ಹನುಮಂತ,7 ನೇ ತರಗತಿ , ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಟಿ ಬಸಾಪುರ ಕೂಡ್ಲಿಗಿ ತಾ ವಿಜಯನಗರ ಜಿಲ್ಲೆ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?

ಮನೆಯೇ ಮಂತ್ರಾಲಯ ವಾದರೆ....... ಮನೆಯೇ ಮಂತ್ರಾಲಯ ಮನಸೇ ದೇವಾಲಯ ಈ ಹಾಡು ಕೇಳಿದ್ದೇವೆ. ನಿತ್ಯ ಬದುಕಿನಲ್ಲಿ ಮನೆ –ಮನಗಳ ನಿಜ ಸ್ಥಿತಿ ಹೇಗಿದೆ ಅನ್ನೋದನ್ನ ಅರಿಯಬೇಕಿದೆ. ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರು ಭವ್ಯ ಅರಮನೆಗಳಲ್ಲಿ ವಾಸಿಸುತ್ತಿದ್ದರೆಂದು ಇತಿಹಾಸ ಹೇಳುತ್ತದೆ. ಅದಕ್ಕೆ ಸಾಕ್ಷಿಯಾಗಿ ಹಲವಾರು ಭವ್ಯ ಸ್ಮಾರಕಗಳು ನಮ್ಮ ಕಣ್ಮುಂದೆ ಇವೆ. ಹಾಗೆಯೇ ಪ್ರಸ್ತುತ ದಿನಗಳಲ್ಲಿ ನೋಡುತ್ತಿರುವ ಗಗನಚುಂಬಿ ಕಟ್ಟಡಗಳು ಅರಮನೆಯಂತಹ ಮನೆಗಳು ಸಹಜ ವಾಗಿವೆ. 'ಮದುವೆ ಮಾಡಿ ನೋಡು ಮನೆ ಕಟ್ಟಿ ನೋಡು' ಎಂಬ ಮಾತಿನಂತೆ ಸಾಲ ಮಾಡಿ ಆದರೂ ಸಕಲ ಸೌಕರ್ಯಗಳಿರುವ ಸುಂದರ, ವಿಶಾಲ, ಐಶಾರಾಮಿ ಜೀವನ ಶೈಲಿಯ ಮನೆಗಳೇ ಎಲ್ಲರಿಗೂ ಪ್ರಿಯ. ಗುಡಿಸಲುಗಳು ಬಡತನದ ಪರಿಕಲ್ಪನೆ ನೀಡುವು ದಾದರೆ ಸುಂದರ ಸುಸಜ್ಜಿತ ಮನೆಗಳು ಅಭಿವೃದ್ಧಿಯ ಸಂಕೇತವಾಗಿವೆ. ದೇಶದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸಕಾರಾತ್ಮಕ ಬದಲಾವಣೆಗೆ ಸ್ವಾಗತವಿದೆ. ಆದರೆ ಮನೆಗಳಲ್ಲಿ ಮನುಷ್ಯರಿ ದ್ದಾರೆಯೇ? ಮನಃಶಾಂತಿ ಇದೆಯೇ? ಮನೆಗಳು ಪವಿತ್ರ ಭಗವಂತನ ವಾಸಸ್ಥಾನ ಗಳಾಗಿವೆಯೇ? ಎನ್ನುವುದೇ ಇಂದು ತಿಳಿಯಬೇಕಾದ ವಿಷಯ ವಾಗಿದೆ. ಜೀವನದ ಆಸರೆಯಾಗಿ ಕುಟುಂಬ ಒಂದೆಡೆ ನೆಲೆ ನಿಲ್ಲಲು ಕಟ್ಟಿದ ಮನೆಗಳು ಇಂದು ಮನಗಳ ನಡುವೆ ಅಡ್ಡ ಗೋಡೆಗಳು ಸೃಷ್ಟಿಯಾಗಿವೆ. ಒಂದು ಮನೆಗೆ ಒಂದೇ ಹೆಬ್ಬಾಗಿಲು ಒಬ್ಬರೇ ಒಡೆಯ ಎನ್ನುವ ಸಂಸ್ಕೃತಿ ಇಂದು ಮನೆಯೊಂದು ಹತ್ತಾರು ಬಾಗಿಲು ಮನೆಯೊಳಗೆ ಮನೆಯೊಡೆಯನಿಲ್ಲ ಎನ್ನುವ ಪರಿಸ್ಥಿತಿಗೆ ಬಂದು ನಿಂತಿದೆ.
ಬಸವಣ್ಣನವರ ಪ್ರಸಿದ್ಧ ವಚನವನ್ನು ಹೆಚ್ಚು ಪ್ರಸ್ತುತವೆನಿಸುತ್ತದೆ.

**"ಮನೆಯೊಳಗೆ ಮನೆಯೊಡೆಯನಿದ್ದಾನೋಇಲ್ಲವೋ?**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ,**
**ಮನೆಯೊಳಗೆ ರಜತುಂಬಿ**
**ಮನೆಯೊಳಗೆ ಮನೆಯೊಡೆಯ**
**ನಿದ್ದಾನೋಇಲ್ಲವೋ?**
**ತನುವಿನೊಳಗೆ ಹುಸಿ ತುಂಬಿ,**
**ಮನದೊಳಗೆ ವಿಷಯತುಂಬಿ**
**ಮನೆ ಯೊಳಗೆ ಮನೆಯೊಡೆ ಯಲಿಲ್ಲಾ ಕೂಡಲ ಸಂಗಮದೇವಾ"**



ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

ಈ ವಚನ ಶರಣರ ಚಿಂತನೆಯಲ್ಲಿ ಮನೆಯ ಪರಿಕಲ್ಪನೆಯನ್ನು ಅರಹುತ್ತದೆ. ದೇಹವೇ ದೇವಾಲಯ ಎಂಬಂತೆ ದೇಹ ಮನಸ್ಸು ಪರಿಶುದ್ಧ ವಾಗಿದ್ದಾಗ ಅಲ್ಲಿ ಭಗವಂತ ನೆಲೆಗೊಳ್ಳುತ್ತಾನೆ. ಸುಳ್ಳು ಮೋಸ ಹುಸಿ ತನುವಿನಲ್ಲಿ ತುಂಬಿ ಮನದಲ್ಲಿ ದುರಾಸೆಗಳು ತುಂಬಿದಲ್ಲಿ ಮನೆಯೊಡೆಯನಿರಲು ಹೇಗೆ ಸಾಧ್ಯ? ಎಂಬುದು ಈ ವಚನದತಾತ್ಪರ್ಯ. ಮುಂದುವರೆದು ಮತ್ತೊಂದು ವಚನದಲ್ಲಿ

**"ಎನ್ನ ಕಾಲೇ ಕಂಬ**
**ದೇಹವೇದೇಗುಲ**
**ಶಿರವೇ ಹೊನ್ನ ಕಳಶವಯ್ಯ"**

ಇನ್ನು ಅಲ್ಲಿ ದೇಹ ಮನೆಯಾಗಿ ಉಳಿಯದೆ ದೇವಾಲಯವಾಗಿ ಪರಿವರ್ತಿತವಾಗಿದೆ. ಶರಣರ ಚಿಂತನೆಯಲ್ಲಿ ಈ ಶರೀರವನ್ನು ಮನೆಗೆ ಹೋಲಿಸಿರುವುದಾದರೂ ಈ ಮನೆ ಭಗವಂತನ ವಾಸಕ್ಕೆ ಯೋಗ್ಯವಾಗಿರಬೇಕು ಎಂಬುದು ಅವರ ಸ್ಪಷ್ಟ ನಿಲುವಾಗಿದೆ. ತನು ಮತ್ತು ಮನ ಎರಡು ಶುದ್ಧವಾಗಿರಬೇಕು. ಶರೀರ ಎನ್ನುವುದು ಕೇವಲ ಬಾಹ್ಯ ಕಾರ್ಯಗಳ ನಿರ್ವಹಣೆಗೆ ಮಾತ್ರ ಸೀಮಿತವಾದುದಲ್ಲ. ಶರೀರವನ್ನು ಲಘುವಾಗಿ ಪರಿಗಣಿಸದೆ ಅದು ಶಿವ ನಿಲಯವೇ ಆಗಿರುವಂಥದ್ದು.

**"ಕಲ್ಯಾಣವೆಂಬುದನ್ನಾರಿಗೂ ಹೋಗಬಾರದು**
**ಆಸೆ ಆಮಿಷಗಳನಳಿದವಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು**
**ಅಷ್ಟೇಅಲ್ಲದೆ**
**ಆಸೆ ಆಮಿಷಗಳನಳಿದಿರಬೇಕು**
**ಒಳಗೂ ಹೊರಗೂ ಶುದ್ಧವಾಗಿರಬೇಕು**
**ಅಂಥವರಿಗೆ ಮಾತ್ರಕಲ್ಯಾಣಕ್ಕೆ ಪ್ರವೇಶ"**

ಶರಣರ ಚಿಂತನೆಯಲ್ಲಿ ಮನೆ ಎಂಬುದು ಮನಸ್ಸೇ ಆಗಿರುವಂತೆ ಒಂದು ಊರು ಸಹ ಮನಸ್ಸಿನಷ್ಟೇ ಮಹತ್ವ ಎನ್ನುತ್ತಾರೆ. ಹಾಗಾಗಿ ಕಲ್ಯಾಣವೆಂಬದು ಮನಸ್ಸಿನ ಒಂದು ಅವಸ್ಥೆ. ಅಂತರಂಗ ಬಹಿರಂಗ ಶುದ್ಧವಾದವರಿಗೆ ಮಾತ್ರ ಕಲ್ಯಾಣಕ್ಕೆ ಪ್ರವೇಶ ಎನ್ನುತ್ತಾರೆ. ನಾವಿರುವಲ್ಲಿಯೇ ಮನದ ಕಳೆಯನ್ನು ಕಳೆದು ಪರಿಶುದ್ಧವಾದರೆ ನಮ್ಮ ಮನೆಯೇ ಕಲ್ಯಾಣವಾಗುವುದು. ಮನೆಗೆ ಅಂತಸ್ತುಗಳು ನಿರ್ಮಿಸುವಂತೆ ಬದುಕಿನಲ್ಲಿ ಅಂತಸ್ತುಗಳು ಸಾಧನೆಯ ಮೆಟ್ಟಿಲುಗಳಾಗಬೇಕು. ಸರಳತೆ ಸುಸಂಸ್ಕೃತಿ ಸದಾಚಾರ ಸದ್ವಿಚಾರ ಸನ್ನಡತೆ ಸ್ವಯಂ ಪರಿಪೂರ್ಣತೆ ಬದುಕಿನ ಸಾರ್ಥಕತೆಯ ಅಂತಸ್ತುಗಳಾಗಬೇಕು.

ಮನೆಯ ಒಳನೋಟ ಹೊರನೋಟ ಮನೆಯ ಉಸ್ತುವಾರಿ ಮನೆಯೊಳಗಿನ ಪೀಠೋಪಕರಣಗಳ ಜೋಡಣೆ ವಿಷಯ ನಮ್ಮ ವೈಯಕ್ತಿಕ ಆಸಕ್ತಿಗೆ ಅನುಗುಣವಾಗಿದ್ದರೂ ಸಮಾಜದ ಪರಿಕಲ್ಪನೆ ನಮ್ಮ ಗಮನದಲ್ಲಿರಬೇಕು. ಏಕೆಂದರೆ ನಮ್ಮ ಮನೆಯ ಒಳಗೆ ಹೊಳೆಯುವ ಕಿಟಕಿ ಪರದೆಯನ್ನು ನಾವು ಎಳೆ ಬಿಟ್ಟ ಪಕ್ಷದಲ್ಲಿ ಹೊರಗಿನಿಂದ ನೋಡುವವರಿಗೆ ಅದು ಹೇಗೆ ಕಾಣುತ್ತದೆ ಎಂಬುದರ ಬಗ್ಗೆ ಎಚ್ಚರವಿರಬೇಕು. ನಮ್ಮ ಪೌರ ಜವಾಬ್ದಾರಿಯನ್ನು ಮರೆಸುವಷ್ಟು ಅದು ನಮ್ಮನ್ನು ವಿಮುಖಗೊಳಿಸಬಾರದು. ವಿಶಾಲವಾದ ಸಮಾಜದಲ್ಲಿ ಸುಸಂಸ್ಕೃತರಾಗಿ ಸ್ಥಾನ ಗಳಿಸಿದಾಗಲೇ ನಮ್ಮ ಅಸ್ತಿತ್ವದ ಪ್ರತಿರೂಪವಾಗಿ ಮನೆ ಮತ್ತು ಬದುಕಿಗೆ ಅರ್ಥ ಪ್ರಾಪ್ತಿಯಾಗುವುದು. ಹಾಗಾಗಿ ನಮ್ಮ ಪುಟ್ಟ ಮನೆ ಎಲ್ಲಾ ವ್ಯವಹಾರಗಳಿಗೂ ಆಚರಣೆಗಳಿಗೂ ಸಮಾಜದ ಪರಿಕಲ್ಪನೆ ಅತ್ಯಗತ್ಯ.



## ವಚನೋತ್ಸಾಹ

**"ಬೆಟ್ಟದ ಮೇಲೆ ನಿರ್ಮಿಸಿದುದು**
**ಸಮುದ್ರದತಡಿಯಲ್ಲಿರೂಪಗೊಂಡದ್ದು**
**ಸಂತೆಯಲ್ಲಿತಲೆಯೆತ್ತಿದುದು"**

ಅಕ್ಕಮಹಾದೇವಿಯ ಈ ವಚನ ಈ ಸಂದರ್ಭದಲ್ಲಿ ಹೆಚ್ಚು ಹೋಲುತ್ತದೆ. ಸಾಮಾನ್ಯ ಮನೆಗಳಲ್ಲಿ ಸಮಸ್ಯೆಗಳು ಕಂಟಕಗಳು ಸಹಜ. ಇವುಗಳ ಮಧ್ಯೆ ನಾವು ಜೀವಿಸಬೇಕು. ಅಕ್ಕ ಹೇಳುವಂತೆ ಬಹಿರಂಗದ ಕಂಟಕಗಳಿಗೆ ಅಂತರಂಗದಲ್ಲಿ ಸಮಾಧಾನವಾಗಿರಬೇಕು. ಮದರ್ ತೆರೇಸಾ ತಮ್ಮ ಸಾಧನೆಯ ಹಾದಿಯಲ್ಲಿ ಒಂದು ಘಟ್ಟದಲ್ಲಿ "ಈಗ ನನ್ನ ಪ್ರಾರ್ಥನೆ ಸದೃಢವಾದ ಮನೆಯಂತಾಗಿದೆ" ಎನ್ನುತ್ತಾರೆ ಮನೆ ಸದೃಢವಾಗಿ ಇರಬೇಕಾದರೆ ಪ್ರಾರ್ಥನೆ ಸದೃಢವಾಗಿರಬೇಕು. ಅಲ್ಲಿ ವಿವೇಕ ಸಂಯಮ ಮತ್ತು ದೃಢತೆ ಪ್ರಾಪ್ತವಾಗುವುದು ಅಮರತ್ವದ ಗುಣಗಳು ಅಂಕುರಿಸಿ ಬೆಳೆದು ದೇವರ ಕಡೆ ನಮ್ಮ ಗಮನವನ್ನು ಸೆಳೆದು "ದೇವರಿಲ್ಲದೆ ಬದುಕಿಲ್ಲ" ಎಂಬ ನಿಜವನ್ನು ನಮಗೆ ಮನದಟ್ಟು ಮಾಡುವಂಥದ್ದಾಗಿದೆ.

ಒಟ್ಟಾರೆ ಶರಣರು ಬದುಕಿ ಬಾಳಿದ ಅರಿವಿನ ಮನೆಗಳಂತೆ ನಮ್ಮ ಮನೆಗಳಾಗಲಿ. ಬದುಕಿನ ಗುರಿ ಧ್ಯೇಯ ಎಲ್ಲವೂ ನಮ್ಮ ಪ್ರಯತ್ನಕ್ಕೆ ಗುರು ಕರುಣೆ ಒದಗಿ ಬರಲು ಆದ್ದರಿಂದ ಮನೆಯೊಳಗೆ ಮನೆಯೊಡೆಯ ಇದ್ದಾನೆ ಎನ್ನುವಂತೆ ನಾವು ಬದುಕಲು ಪ್ರಯತ್ನಿಸೋಣ.

# ಬಸ್ಸೋ--ಸುಸ್ತೋ

ಗುಂಡ– ನೆನ್ನೆ ನಮ್ಮೂರಿಗೆ ಹೋಗೋಣವೆಂದು ಬಸ್ ನಿಲ್ದಾಣಕ್ಕೆ ಹೋದೆ ಅಲ್ಲಿ ಜನವೋ ಜನ. ಅಲ್ಲಿದ್ದ ಬಸ್ಸುಗಳಿಗೆ ಕೆಲವಕ್ಕೆ ಬೋರ್ಡ್ ಇದೆ ಇನ್ನು ಕೆಲವಕ್ಕೆ ಬೋರ್ಡ್ ಇಲ್ಲ ಈ ಜನ ಮಾತ್ರ ಎಲ್ಲಾ ಬಸ್ಸು ತುಂಬಿದ್ದಾರೆ. ಇರು ಯಾರನ್ನಾದರೂ ಕೇಳೋಣ ಎಂದು ಬಸ್ಸೊಳಗೆ ಹೆಜ್ಜೆ ಇಟ್ಟೆ ಈ ಬಸ್ಸು ಎಲ್ಲಿ ಹೋಗುತ್ತದೆ ಎಂದು ಕೇಳಿದರೂ ಒಬ್ಬರೂ ಉತ್ತರ ಕೊಡಲಿಲ್ಲ ಮತ್ತೆ ಒಳಗೆ ಹೋದೆ ಅಲ್ಲಿ ಕೇಳಿದೆ ಅಲ್ಲೂ ಉತ್ತರವಿಲ್ಲ ಏನಪ್ಪಾ ಈ ಬಸ್ ತುಂಬಾ ಜನ ಇದ್ದರೂ ಇದು ಎಲ್ಲಿಗೆ ಹೋಗುತ್ತೆ ಅಂತ ಕೇಳಿದರೆ ಯಾರೂ ಹೇಳುತ್ತಿಲ್ಲ. ಏನ್ ಮಾಡೋದು ಅಂತ ಐದು ನಿಮಿಷ ಬಸ್ಸೊಳಗೆ ನಿಂತೆ.

ಗೆಳೆಯ– ನಿಮ್ಮೂರಿನ ಬಸ್ ಬರೋವವರೆಗೂ ಕಾಯ ಬೇಕಾಗಿತ್ತು ಬೋರ್ಡ್ ಇಲ್ಲದೆ ಇರುವ ಬಸ್ ಯಾಕ್ ಅತ್ತ ಬೇಕಾಗಿತ್ತು?


ಗುಂಡ– ನೀನು ಹೇಳಿದಂತೆ ಕೇಳಿದರೆ ನಾನು ಊರಿಗೆ ಹೋಗುವುದಕ್ಕೆ ಆಗುತ್ತಿರಲಿಲ್ಲ.

ಗೆಳೆಯ– ಹಾಗಾದರೆ ಹೇಗೆ ಊರಿಗೆ ಹೋದೆ?

ಗುಂಡ– ಒಳಗೆ ನಿಂತಿದ್ದೆ ಬಸ್ನಲ್ಲಿ ಜನ ನಮ್ಮನ್ನು ಹಿಂದಕ್ಕೆ ನೂಕಿದರು ಆಮೇಲೆ ಪಕ್ಕದಲ್ಲಿ ಒಂದು ಬಸ್ ಬಂದು ನಿಂತಿತ್ತು ತಕ್ಷಣವೇ ನಾನು ಸ್ವಲ್ಪ ದಾರಿ ಬಿಡಿ ಆ ಬಸ್ ಗೆ ಹೋಗುತ್ತೇನೆ ಅಂದೆ. ಅದರಲ್ಲಿ ಒಬ್ಬರು ಇಲ್ಲಿ ದಾರಿಯಿಲ್ಲ ಸುಮ್ನೆ ನಿಂತ್ಕೊಳ್ಳಿ ಅಂದರು. ಅಲ್ಲ ಸರ್ ಈ ಬಸ್ ಎಲ್ಲಿ ಹೋಗುತ್ತೆ ಅಂತ ಗೊತ್ತಿಲ್ಲ ಎಲ್ಲರೂ ಇದರಲ್ಲಿ ಅತ್ತಿ ಕುಳಿತಿದ್ದಾರೆ. ನಮ್ಮೂರಿನ ಬಸ್ಸು ಹೊರಟು ಹೋದರೆ ನನಗೆ ಈಗ ಬಸ್ ನಿಲ್ದಾಣ ಗತಿ ಸ್ವಲ್ಪ ದಾರಿ ಬಿಡಿ plz ಎಂದೆ

ಗೆಳೆಯ– ಹಾಗಾದ್ರೆ ನೀನು ಇಳಿದು ಬೇರೆ ಬಸ್ ಅತ್ತಿದಾ?

ಗುಂಡ– ಅಯ್ಯೋ ಇಲ್ಲಪ್ಪ ದಾರಿನೇ ಬಿಡ್ಲಿಲ್ಲ.ಇವತ್ತು ಇವರೆಲ್ಲಾ ನನ್ನ ಯಾವೂರಿಗೆ ಸೇರಿಸುತ್ತಾರೂ? ಅಲ್ಲಿಂದ ಹೇಗೆ ಬರಬೇಕು?ಈ ತರ ಯಾಕ್ ಮಾಡ್ತಾರೆ?ಎಂತಹ ಪರಿಸ್ಥಿತಿ ಬಂತು ನನಗೆ ಎಂದು ಚಿಂತಿಸಿದೆ ಬಹಳ ಬೇಸರವಾಯಿತು.




ಜಿ.ಆರ್.ಬಸವರಾಜೇಶ್ವರಿ
ಹವ್ಯಾಸಿ ಬರಹಗಾರರು, ಹಗರಿಗಜಾಪುರ

Scan For Digital Colourful
HAMPI TIMES E-paper

ಗೆಳೆಯ– ನೀನು ಅಂತಹ ಸಮಯದಲ್ಲಿ ನನಗೆ ಫೋನ್ ಮಾಡಬೇಕಾಗಿತ್ತು. ಈಗ ಬಸ್ನಲ್ಲಿ ಹೆಂಗಸರು ಗಂಡಸರು ಗುಂಪು ಗುಂಪಾಗಿ ಬಂದು ಯಾರಾದರೂ ಒಬ್ಬರು ಜಾಗ ಬಿಡಿ. ವಯಸ್ಸಾದವರಿಗೆ ಅಂದ್ರೆ ಸಾಕು ಹಾಗೆ ಗುಂಪಾಗಿ ಜಗಳ ಮಾಡುತ್ತಾರೆ ಕಿತ್ತಾಟಕ್ಕೆ ಬೀಳುತ್ತಾರೆ ಹೊಡೆ ದಾಡುತ್ತಾರೆ. ನೀನು ಒಂದು ಕಾಲ್ ಮಾಡಿದ್ರೆ ನಮ್ಮ ಹುಡುಗರ ಕರ್ಕೊಂಡು ಬರ್ತಿದ್ದೆ ನಾನು.

ಗುಂಡ– ಅಯ್ಯೋ ನಮ್ಮಂತ ಕೆಲಸಕ್ಕೆ ಹೋಗೋ ಮಂದಿಗೆ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆ ಪ್ರತಿದಿನ ಇದೇ ಕಥೆ ಎಂದು ಚಡ ಪಡಿಸುತ್ತಿದ್ದೆ ಪಕ್ಕದಲ್ಲಿ ನಿಂತಿದ್ದ ಒಬ್ಬ ವ್ಯಕ್ತಿ ನೋಡಿ ಸರ್ ಬೇಜಾರ್ ಮಾಡಿಕೊಳ್ಳಬೇಡಿ ಇಲ್ಲಿ ಕುಳಿತಿರುವ ಯಾರಿಗೂ ಈ ಬಸ್ಸು ಎಲ್ಲಿ ಹೋಗುತ್ತೆ ಅಂತ ನಿಜಕ್ಕೂ ಗೊತ್ತಿಲ್ಲ? ಕಂಡಕ್ಟರ್ ಡ್ರೈವರ್ ಬಂದ ತಕ್ಷಣ ಅವರನ್ನು



ಕೇಳಿ ಇಳಿದರಾಯಿತು ಎಂದು ಬಸ್ನಲ್ಲಿ ಕುಳಿತಿದ್ದೇವೆ ಅಷ್ಟೇ ಅಂದ್ರು.

ಗೆಳೆಯ– ಒಳ್ಳೆ ಐಡಿಯಾ ಮಾಡಿದ್ದಾರಲ್ವಾ

ಗುಂಡ– ನಿನಗೆ ತಮಾಷೆ ನನಗೆ ಪ್ರಾಣ ಸಂಕಟ ಒಂದು ತಾಸು ನಿಲ್ಲದಕ್ಕೂ ಆಗ್ತಾಯಿಲ್ಲ ಇ ಳಿ ೦ು ು ವ್ರ ದ ಕ ್ರ ಆಗ್ತಾಯಿಲ್ಲ ದಯಮಾಡಿ ನನಗೆ ದಾರಿ ಬಿಡಿ ಎಂದರೂ ನನ್ನನ್ನು ಬಿಡುತ್ತಿರಲಿಲ್ಲ ಅಷ್ಟರಲ್ಲಿ ಒಬ್ಬರು ಸರ್ ಇದು ನಿಮ್ಮ ಊರಿಗೆ ಹೋಗುತ್ತೆ ಇಳಿಯಲು ಪ್ರಯತ್ನಿಸಬೇಡಿ ಅನ್ನುವಷ್ಟರಲ್ಲಿ ಕಂಡಕ್ಟರ್ ಬಸ್ಸಿನಲ್ಲಿ ಎಲ್ಲರನ್ನ ತಳ್ಳಿಕೊಂಡು ಒಳಗೆ ಬಂದರು.
ಎಲ್ಲಿಗೆ ನಿಮಗೆ ಟಿಕೆಟ್ ಕೊಡಬೇಕು ಎಂದರು. ನಮ್ಮ ಊರಿಗೆ ಎಂದು ಕೇಳಿದ ತಕ್ಷಣ ಟಿಕೆಟ್ ಕೊಟ್ಟರು ಆಗ ಸಮಾಧಾನವಾಯಿತು, ಓಹೋ ಇದು ನಮ್ಮ ಊರಿಗೆ ಹೋಗುತ್ತದೆ ಎಂದು. ಸರಿ ಹಿಂದೆ ಬಂದು ನಿಂತುಬಿಟ್ಟಿದ್ದೇನೆ ಟಿಕೆಟ್ ಪಡೆದಿದ್ದೇನೆ . ಇನ್ನು ಊರು ಬರೋವರೆಗೂ ಸುಮ್ನೆ ನಿಂತ್ರೆ ಆಯ್ತು ಎಂದು ನಿಂತು ಬಿಟ್ಟೆ. ಬಸ್ಸು ಹೊರಟಿತು ದಾರಿಯುದ್ಧಕ್ಕೂ ಬಸ್ ನಮ್ಮನ್ನು ಎತ್ತಿ ಎತ್ತಿ ಮೇಲೆ ಎಸೆಯುತ್ತಿತ್ತು. ಹಾಗೆ ಒಂದ್ಸಲ ಕೊನೆ ಸೀಟಿನ ಜನರನ್ನು ನೋಡಿದೆ ಅವರೆಲ್ಲಾ ಪಾಪ ಬಸ್ಸು ಮೇಲೆ ಎತ್ತಿ ಎತ್ತಿ ಹಾಕಿದಾಗಲೆಲ್ಲ ಅಯ್ಯೋ ಅಪ್ಪಾ ಅಮ್ಮ ಎನ್ನುತ್ತಿದ್ದರು ಇದು ಬಸ್ ಓಡಿಸುವ ಚಾಲಕನ ತಪ್ಪೋ ಅಥವಾ ರಸ್ತೆಯ ತಗ್ಗಿನ ತಪ್ಪೋ ತಿಳಿಯದಾಯಿತು.

ಗೆಳೆಯ– ಅಂತೂ ಹೇಗೋ ಊರು ಸೇರಿದೆ

ಗುಂಡ– ನೀನು ಅಷ್ಟು ಸುಲಭವಾಗಿ ನಾನು ಊರಿಗೆ ಸೇರಿದನೆಂದು ಹೇಳಬೇಡ? ಬಸ್ ನಿಲ್ದಾಣದಲ್ಲಿ ನಮ್ಮನ್ನು ಒಳಕ್ಕೆ ಹೇಗೆ ತಳ್ಳುತ್ತಾರೋ ಹಾಗೆ ಬಸ್ ನಿಲ್ದಾಣಕ್ಕೆ ಬಂದ ತಕ್ಷಣ ಬಸ್ ನೊಳಗೆ ನಾವು ಇರುವುದನ್ನು ಗಮನಿಸದೇ ನಮ್ಮನ್ನು ಇಳಿಯಲು ಬಿಡದೆ ಒಳಗೆ ನುಗ್ಗುತ್ತಾರೆ. ಮಕ್ಕಳನ್ನು ಕಿಟಕಿಯಿಂದ ಒಳಗೆ ನೂಕಿ ಸೀಟ್ನ್ನು ಹಿಡಿಯುತ್ತಾರೆ ಅಲ್ಲೂ ಭಯ ಆತಂಕ ಹೊರಗೆ ನಿಂತು ಜೋರಾಗಿ ಕೈ ತೋರಿಸುತ್ತಾ ನಮ್ಮದು 10 ಸೀಟ್ ಹಾಕಿ ಎಂದು ಟವಲ್ ಕೊಟ್ಟು ಗದರಿಸುತ್ತಾರೆ ಕೆಳಗಿನ ಮೆಟ್ಟಲಿಗೆ ಹೆಜ್ಜೆ ಇಟ್ಟರೆ ಸಾಕು ಕೆಳಗೆ ನಿಂತ ಜನರೇ ನಮ್ಮನ್ನು ಎಳೆದು ನೂಕುತ್ತಾರೆ. ಬುದ್ಧಿ–ಧೈರ್ಯ ಇದ್ದರೆ ಕಡೆಗೆ ಬರುತ್ತೇವೆ.ಇಲ್ಲ ಅಂದ್ರೆ ಅವರ ಕಾಲ ಕೆಳಗೆ ಇರುತ್ತೇವೆ.

ಗೆಳೆಯ– ಪಾಪ ಏನೋ ನಿನ್ನ ಕಥೆ ಇಷ್ಟೊಂದು ವ್ಯಥೆಯಾಗಿದೆ?

ಗುಂಡ–ಇದು ನನ್ನ ಒಬ್ಬನ ಕಥೆಯಲ್ಲ ವ್ಯಥೆಯಲ್ಲ ಸಾಕಷ್ಟು ಜನ ಕೆಲಸಕ್ಕೆ ಹೋಗುವ ಮತ್ತು ಕಾಲೇಜಿಗೆ ಬರುವ ವಿದ್ಯಾರ್ಥಿಗಳ ಪಾಡು ಹೇಳುತೀರದು?ಜನ ಸಮಾಧಾನ ತಾಳ್ಮೆ ಕಳೆದುಕೊಂಡಿದ್ದಾರೆ.

ಗೆಳೆಯ–ನೋಡು ನಾವು ಅನುಭವಿಸಿದ ನೋವು ನಮ್ಮದೇ ಅದನ್ನು ಯಾರಿಗೆ ಹೇಳಿದರೂ ಪ್ರಯೋಜನವಿಲ್ಲ ಬದಲಾಗಿ ನೀನು ಬದಲಾಗು ಈ ರೀತಿ ತುಂಬಿಕೊಂಡು ಬರುವ ಬಸ್ಸುಗಳಲ್ಲಿ ನೀನು ಪ್ರಯಾಣಿಸಬೇಡ ಬದಲಾಗಿ ಸ್ವಲ್ಪ ಹೊತ್ತು ಕಾದು ನೋಡು ಇಲ್ಲವಾದರೆ ಬೇರೆ ಗಾಡಿ ತೆಗೆದುಕೊಂಡು ಹೋಗು.

ಗುಂಡ– ಸಾಕಪ್ಪ ಸಾಕು ನನಗೆ ಈ ಬಸ್ನ ಸಹವಾಸ ಬಸ್ಸು ಅಲ್ಲ ಬರೀ ಸುಸ್ತೋ ಸುಸ್ತೋ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 159 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.12.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 159 • PRGI No:KARKAN/2023/88055 • VIJAYANAGARA • 25.12.2024 • Wednesday • Page:04 • Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


# ಗ್ರಾಹಕನೇ ಸಾರ್ವಭೌಮ

## ಗ್ರಾಹಕ ಸಂರಕ್ಷಣಾ ಕಾಯಿದೆ, ಹಕ್ಕುಗಳನ್ನ ತಿಳಿಯಿರಿ

### ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ್ ಹೇಳಿಕೆ




**■ ಹಂಪಿ ಟೈಮ್ಸ್ ಹೊಸಪೇಟೆ**

ಸಾಂಘಿಕ ಸಮುದಾಯದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬರು ಗ್ರಾಹಕರೇ, ತಮ್ಮ ಗ್ರಾಹಕ ಹಕ್ಕುಗಳನ್ನು ಅರಿತು ಕಾಯಿದೆಯ ಸದುಯೋಗ ಪಡಿಸಿಕೊಂಡರೇ ಮಾರುಕಟ್ಟೆಯಲ್ಲಿ ಗ್ರಾಹಕನೇ ಸಾರ್ವಭೌಮನಾಗುತ್ತಾನೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ್ ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸೇರಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು, ಗ್ರಾಹಕರು ತಾವು ಖರೀದಿಸುವ ಸರಕು ಅಥವಾ ಸೇವೆಗಳಲ್ಲಿ ಯಾವುದೇ ರೀತಿಯ ಲೋಪದ ಸರಕುಗಳು, ಸಮಧಾನಕರವಲ್ಲದ ವ್ಯಾಪಾರ ಪದ್ಧತಿಗಳು ಕಂಡುಬಂದರೆ ಅದರ ವಿರುದ್ಧ ಸುರಕ್ಷೆ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ. ಈ ದಿನ ಗ್ರಾಹಕರಿಗೆ ಗ್ರಾಹಕ ಹಕ್ಕುಗಳ ಮಹತ್ವವನ್ನು ಮನವರಿಕೆ ಮಾಡಿಕೊಡಲು ಹಾಗೂ ಇತರರಿಗೆ ಈ ಬಗ್ಗೆ ಜಾಗೃತಿ ಮೂಡಿಸಲು ಅವಕಾಶ ನೀಡಲಾಗಿದೆ. ಗ್ರಾಹಕ ಚಳವಳಿಗಳ ಮಹತ್ವ ಹಾಗೂ ಗ್ರಾಹಕರಿಗೆ ತಮ್ಮ ಹಕ್ಕು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಅನುಕೂಲವಾಗಲಿದೆ. ಭಾರತದಲ್ಲಿ 1986 ರ ಡಿಸೆಂಬರ್ 24 ರಂದು ಗ್ರಾಹಕ ಸಂರಕ್ಷಣಾ ಕಾಯಿದೆಗೆ ಸಂಸತ್ತಿನಲ್ಲಿ ಅಂಗೀಕಾರ ದೊರೆತು. ರಾಷ್ಟ್ರಪತಿಗಳ ಅಂಕಿತ ದೊರಕಿತ್ತು. ಈ ಕಾಯಿದೆಯನ್ನು ಅನುಷ್ಠಾನಗೊಳಿಸಿದ್ದನ್ನು ದೇಶದ ಗ್ರಾಹಕ ಚಳವಳಿಯಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ ಎಂದು ಭಾವಿಸಬಹುದಾಗಿದೆ. ಉತ್ಪಾದಕರು ಮತ್ತು ಮಾರಾಟಗಾರರಿಂದ ಆಗುವ ಗ್ರಾಹಕ ಶೋಷಣೆಗಳಿಂದ ಸೂಕ್ತ ರಕ್ಷಣೆ ಒದಗಿಸುವ ಸದುದ್ದೇಶದಿಂದ ಕಾಯಿದೆ ಜಾರಿಗೆ ತರಲಾಗಿದೆ. ಸಾಂಘಿಕ ಸಮುದಾಯದಲ್ಲಿರುವ ಪ್ರತಿಯೊಬ್ಬರು ಗ್ರಾಹಕರೇ ಆಗಿರುವುದರಿಂದ ಸಂರಕ್ಷಣಾ ಕಾಯಿದೆ ಬಗ್ಗೆ ಅರಿವು ಪಡೆದುಕೊಂಡು ಕಾಯಿದೆಯ ಸದುಪಯೋಗಪಡೆದುಕೊಳ್ಳಬೇಕಿದೆ ಎಂದರು.

ಈ ವೇಳೆ ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬರ ಮತ್ತೂರು, ತಹಸೀಲ್ದಾರ ಶೃತಿ ಎಂ ಮಳ್ಳಪ್ಪಗೌಡ್ರ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸ ಮೂರ್ತಿ, ಶಿಶು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನಾಧಿಕಾರಿ ಸಿಂಧು ಅಂಗಡಿ, ಇತರರಿದ್ದರು.

## ನಿರೀಕ್ಷಿಸಿ... ಎಸ್‌ಡಿಎಂಸಿ ವರವೋ ಶಾಪವೋ?


## ಮೈಕ್ರೋ ನ್ಯೂಸ್

### ಕುರಿ ಸಾಕಾಣಿಕೆಗೆ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ನೇರಸಾಲ ಯೋಜನೆಯಡಿ ಕುರಿ ಸಾಕಾಣಿಕೆ ಹಾಗೂ ಸ್ವಾವಲಂಬಿ ಸಾರಥಿ (ಪುಡ್ ಕಾರ್ಟ್ ಉದ್ದೇಶಕ್ಕಾಗಿ ಮಾತ್ರ) ಯೋಜನೆಗಳಡಿ ಸೌಲಭ್ಯಕೋರಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನಿಗಮದಿಂದ ಮಾತ್ರ ನೇರಸಾಲ ಯೋಜನೆಯಡಿ ಕುರಿ ಸಾಕಾಣಿಕೆ ಹಾಗೂ ಸ್ವಾವಲಂಬಿ ಸಾರಥಿ ಅರ್ಜಿಗಳನ್ನು ಅರ್ಹಫಲಾನುಭವಿಗಳಿಂದ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದ ಸೇವಾಸಿಂಧು ಪೋರ್ಟಲ್, ಗ್ರಾಮ ಓನ್, ಕರ್ನಾಟಕ ಓನ್ ಕೇಂದ್ರಗಳಲ್ಲಿ ಡಿ.29 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಈಗಾಗಲೇ ಅರ್ಜಿ ಸಲ್ಲಿಸಿದವರು ಮತ್ತೊಮ್ಮೆ ಸಲ್ಲಿಸುವಂತಿಲ್ಲ.

## ಆನಂದ ಬಾಣ




## ಕೆಂಚಮಲ್ಲನಹಳ್ಳಿ ಕ್ಷೇಮ ಆರೋಗ್ಯ ಕೇಂದ್ರಕ್ಕೆ ಆರೋಗ್ಯಾಧಿಕಾರಿಗಳು ಭೇಟಿ ಪರಿಶೀಲನೆ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ವ್ಯಾಪ್ತಿಯಲ್ಲಿನ ಕೆಂಚಮಲ್ಲನಹಳ್ಳಿಯ ಉಪ ಆರೋಗ್ಯ ಕೇಂದ್ರಕ್ಕೆ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಚಿರಂಜೀವಿ ಹಾಗೂ ಸಿಬ್ಬಂದಿ ವರ್ಗ ಆಸ್ಪತ್ರೆಗೆ ಭೇಟಿ ಮಾಡಿ, ಪರಿಶೀಲಿಸಿ, ಆರೋಗ್ಯ ಸಿಬ್ಬಂದಿಗಳೊಂದಿಗೆ ಚರ್ಚಿಸಿ, ರೋಗಿಗಳಿಗೆ ಚಿಕಿತ್ಸೆ ನೀಡುವುದರೊಂದಿಗೆ ನಮ್ಮ ಸುತ್ತ ಮುತ್ತಲಿನ ವಾತವರಣವನ್ನು ಸಂಬಂಧಿಸಿದ ಸ್ವಚ್ಛತೆಯಾಗಿಡಲು ಸಂಬಂಧಪಟ್ಟವರ ಗಮನಕ್ಕೆ ತರಬೇಕು ಎಂದರು.

ಆರೋಗ್ಯ ಕೇಂದ್ರದ ಸುತ್ತಲೂ ಸ್ವಚ್ಛತೆ ಕೈಗೊಳ್ಳಲುಉ ಗ್ರಾಮ ಪಂಚಾಯತಿಯವರಿಗೆ ತಿಳಿಸಿದರು. ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಡಿ.19ರಂದು ಜನರ ಕ್ಷೇಮ-ಆಯುಷ್ಮಾನ್ ಮರೆತ ಸರ್ಕಾರ! ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

# ಗ್ರಾಮ ಆಡಳಿತಾಧಿಕಾರಿಗಳ 1:3 ಅಭ್ಯರ್ಥಿಗಳ ಪಟ್ಟಿ ಪ್ರಕಟ

**■ ಹಂಪಿ ಟೈಮ್ಸ್ ಹೊಸಪೇಟೆ**

ಕಂದಾಯ ಇಲಾಖೆಯಲ್ಲಿನ ಗ್ರಾಮ ಆಡಳಿತಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದ್ದು 1:3 ಅನ್ವಯ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ವಿಜಯನಗರ ಜಿಲ್ಲಾಧಿಕಾರಿ ದಿವಾಕರ್ ಎಂ.ಎಸ್ ತಿಳಿಸಿದ್ದಾರೆ. ರಾಜ್ಯದಲ್ಲಿ ಖಾಲಿ ಇದ್ದ ಒಂದು ಸಾವಿರ ಗ್ರಾಮಾಡಳಿತ ಅಧಿಕಾರಿಗಳ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಲಾಗಿದೆ. ಇದರಲ್ಲಿ ವಿಜಯನಗರ ಕಂದಾಯ ಘಟಕದಲ್ಲಿ ಖಾಲಿ ಇದ್ದ 13 ಹುದ್ದೆಗಳಿಗೆ ಪರೀಕ್ಷೆ ನಡೆದು 264 ಅರ್ಹ ಅಭ್ಯರ್ಥಿಗಳ ಪೈಕಿ ಸಾಮಾನ್ಯ-ಅಂಗವಿಕಲ ಹಾಗೂ ಮೀಸಲಾತಿಯನ್ವಯ 1:3 ಅನುಪಾತದಂತೆ ಅರ್ಹರಾದ 37 ಅಭ್ಯರ್ಥಿಗಳ ವಿವರವನ್ನು https://vijayanagara.nic.in ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಅರ್ಹರಾದ ಅಭ್ಯರ್ಥಿಗಳ ವಿದ್ಯಾರ್ಹತೆ, ಪ್ರಮಾಣ ಪತ್ರಗಳ ಮೂಲ ದಾಖಲೆಗಳ ಪರಿಶೀಲನೆಯನ್ನು 2025ರ ಜನವರಿ 8 ರಂದು, ಬೆಳಗ್ಗೆ 10 ಗಂಟೆಗೆ ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯ 2ನೇ ಮಹಡಿಯ ಸಭಾಂಗಣದಲ್ಲಿ ಮೂಲದಾಖಲೆಗಳ ಪರಿಶೀಲನೆ ನಡೆಯಲಿದೆ. ಅರ್ಹರಾದ ಅಭ್ಯರ್ಥಿಗಳು ತಮ್ಮ ಮೂಲದಾಖಲೆ ಗಳೊಂದಿಗೆ ದೃಢೀಕೃತ ದ್ವಿಪ್ರತಿ, ಎರಡು ಪಾಸ್‌ಪೋರ್ಟ್ ಸೈಜ್ ಭಾವಚಿತ್ರಗಳೊಂದಿಗೆ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಲು ತಿಳಿಸಲಾಗಿದೆ. ಮೂಲ ದಾಖಲೆಗಳ ಪರಿಶೀಲನೆಗೆ ಗೈರು ಹಾಜರಾದಲ್ಲಿ ಎರಡನೇ ಅವಕಾಶ ನೀಡಲಾಗುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

## ಪುರಸಭಾ ಕಾರ್ಯಾಲಯ ಹಗರಿಬೊಮ್ಮನಹಳ್ಳಿ-583212
## ಜಿಲ್ಲೆ-ವಿಜಯನಗರ, ರಾಜ್ಯ-ಕರ್ನಾಟಕ

TOWN MUNICIPAL COUNCIL, HAGARIBOMMANAHALLI-583212, Dist: Vijayanagara , State: Karnataka

website: www.hagaribommanahallitown.mrc.gov.in Email: itstaff_ulb_hballi@yahoo.in Phone:08397-238358

ಸಂಖ್ಯೆ: ತಾಂತ್ರಿಕ/ಕಾಮಗಾರಿ/ಟೆಂಡರ್:2024-25 ದಿನಾಂಕ: 24-12-2024

### -: ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸನ್ 2023-24 ನೇ ಸಾಲಿನ ಎಸ್.ಬಿ.ಎಂ 2.0 ಮತ್ತು 2024-25 ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ /ಅಧೀಕೃತ ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ, ಇಡೆಂಟ್ ಸಂಖ್ಯೆಗಳು ಈ ಕೆಳಗಿನಂತಿರುತ್ತವೆ.

| SL NO | Work Indent Number | Estimate Cost (Lakhs) | EMD Amount (Lakha) | Last Date And Time For Receipt of Tenders | Last Date And Time For Opening of Technical Bid | Last Date And Time For Opening of Financial Bid | Category |
|---|---|---|---|---|---|---|---|
| 1 | DMA/2024-25/BD/ WORK_INDENT33586 | 18.00 | 0.45 | 02-01-2025 | 04-01-2025 | 06-01-2025 | OTHERS |
| 2 | DMA/2024-25/BD/ WORK_INDENT33590 | 9.00 | 0.225 | 02-01-2025 | 04-01-2025 | 06-01-2025 | OTHERS |
| 3 | DMA/2024-25/IND4095 | 1.50 | 0.0375 | 08-01-2025 | 10-01-2025 | 13-01-2025 | OTHERS |

ಮೇಲ್ಕಂಡ ಟೆಂಡರ್‌ಗಳಿಗೆ ಇ-ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ & ಷರತ್ತುಗಳಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸರ್ಕಾರದಿಂದ ಹಂತ ಹಂತವಾಗಿ ಅನುದಾನ ಬಿಡುಗಡೆಯಾದಂತೆ ಕಾಮಗಾರಿಗಳ ಬಿಲ್‌ನ್ನು ಪಾವತಿಸಲಾಗುವುದು ಮತ್ತು ಒಂದು ವೇಳೆ ನಿಗಧಿ ಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು, ಹೆಚ್ಚಿನ ಮಾಹಿತಿಗಾಗಿ http://hagaribommanahallitown.mrc.gov.inರಲ್ಲಿ ಅಥವಾ ಈ ಕಛೇರಿಯ ಕಿರಿಯ ಅಭಿಯಂತರರು ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/- ಶ್ರೀ ಪ್ರಭಾಕರ ಎಂ.ಪಾಟೀಲ್, ಕೆ.ಎಂ.ಎ.ಎಸ್ ಶ್ರೇಣಿ-1
ಮುಖ್ಯಾಧಿಕಾರಿಗಳು
ಪುರಸಭೆ ಕಾರ್ಯಾಲಯ, ಹಗರಿಬೊಮ್ಮನಹಳ್ಳಿ

ಸಹಿ/- ಶ್ರೀ ಎಂ.ಮರಿರಾಮಪ್ಪ,
ಅಧ್ಯಕ್ಷರು
ಪುರಸಭೆ ಕಾರ್ಯಾಲಯ, ಹಗರಿಬೊಮ್ಮನಹಳ್ಳಿ

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ ರಸಪ್ರಶ್ನೆ

ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಸಿಲಬಸ್ ಆಧಾರಿತ ನೀವು ಕಲಿಯಬೇಕಾದ ಕಲಿಕಾಂಶಗಳನ್ನು ಸಂಪೂರ್ಣವಾಗಿ ನೀಡಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆಗೆ ಪರಿಪೂರ್ಣ ಸಿದ್ಧಗೊಳ್ಳಲು ಇನ್ಮುಂದೆ ಪ್ರಶ್ನೋತ್ತರ ಮಾಲೆ ಶುರುವಾಗುತ್ತದೆ. ಇಂದು ನೀಡುವ ಪ್ರಶ್ನೆಗಳಿಗೆ ನೀವು ಉತ್ತರ ಬರೆದು, ನಿಮ್ಮ ಶಿಕ್ಷಕರಲ್ಲಿ ತೋರಿಸಿ ನಿಮ್ಮ ಕಲಿಕಾ ಸಾಮರ್ಥ್ಯವನ್ನು ಅರಿತು, ಮತ್ತಷ್ಟು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ. ಇಂದಿನ ಪ್ರಶ್ನೆಗಳಿಗೆ ಮುಂದಿನ ವಾರ ಉತ್ತರಗಳನ್ನು ನೀಡಲಾಗುವುದು.

### ಗಣಿತ ರಸಪ್ರಶ್ನೆ ಭಾಗ – 1

1) ಒಂದು ತ್ರಿಭುಜದಲ್ಲಿ, ವಿಕರ್ಣಕ್ಕೆ ಅಭಿಮುಖವಾಗಿರುವ ಕೋನದ ಅಳತೆಯು,

2) ಒಂದು ವೃತ್ತವು ಹೊಂದಿರಬಹುದಾದ ಸಮಾಂತರ ಸ್ಪರ್ಶಕಗಳ ಗರಿಷ್ಠ ಸಂಖ್ಯೆಯು,

3) ಸಿಲಿಂಡರಿನ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಯುವ ಸೂತ್ರವು,

4) ಒಂದು ವೃತ್ತದಲ್ಲಿ, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯ ಮತ್ತು ಸ್ಪರ್ಶಕದೊಡನೆ ಉಂಟುಮಾಡುವ ಕೋನವು,

5) $\sin^2 A + \cos^2 A$ ದ ಬೆಲೆಯು,

6) ವರ್ಗೀಕೃತ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯುವ ಸೂತ್ರವು,

7) . ಎರಡು ಸರಳ ರೇಖೆಗಳು, ಐಕ್ಯಗೊಂಡರೆ, ಆ ಸಮೀಕರಣಗಳಿಗೆ,

8) ಮೂಲಬಿಂದು ಮತ್ತು ( 3, 4 ) ಬಿಂದುಗಳ ನಡುವಿನ ದೂರವು,

9) ( -3 , 6 ) ಮತ್ತು ( 5 , 0 ) ಈ ಬಿಂದುಗಳನ್ನು ಸೇರಿಸುವ ರೇಖಾಖಂಡದ, ಮಧ್ಯಬಿಂದುವಿನ ನಿರ್ದೇಶಾಂಕವು,


10) . $a_n = 5n - 3$ ಆದರೆ, $a_5$ ನ ಬೆಲೆಯು,

11) $( x + 5 )( x - 6 )$ ಈ ವರ್ಗಸಮೀಕರಣದ ಮೂಲಗಳು,


12) $A ( x_1 , y_1 )$ ಮತ್ತು $B ( x_2 , y_2 )$ ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು, $P( x , y )$ ಬಿಂದುವು, $m_1 : m_2$ ಅನುಪಾತದಲ್ಲಿ ವಿಭಾಗಿಸಿದಾಗ, Pಯ ನಿರ್ದೇಶಾಂಕಗಳನ್ನು ಕಂಡುಹಿಡಿಯುವ ಸೂತ್ರವು,

13) 10 ಪ್ರಾಪ್ತಾಂಕಗಳ ಸರಾಸರಿಯು 12, ಆದರೆ, ಪ್ರತೀ ಪ್ರಾಪ್ತಾಂಕವನ್ನು 3 ರಿಂದ ಹೆಚ್ಚಿಸಿದಾಗ ಸರಾಸರಿಯು,

14) ಚಿತ್ರದಲ್ಲಿ $\sin\theta = \frac{4}{5}$, ಆದರೆ $\cot\theta$ ದ ಬೆಲೆಯು,




15) .ಎರಡು ಸಮೀಕರಣಗಳನ್ನು ಪ್ರತಿನಿಧಿಸುವ ಸರಳರೇಖೇಗಳು, ಈ ಕೆಳಗಿನಂತೆ ನಕ್ಷೆಯಲ್ಲಿ ಪ್ರತಿನಿಧಿಸಿದರೆ, ಆ ಸಮೀಕರಣಗಳಿಗೆ ಸರಿಹೊಂದುವ ಪರಿಹಾರವು,



16) $5 , 5 + \sqrt{3} , 5 + 2\sqrt{3} , 5 + 3\sqrt{3} , 5 + 4\sqrt{3}$ , . . . . . . ಆದರೆ, ಈ ಶ್ರೇಢಿಯ ಸಾಮಾನ್ಯ ವ್ಯತ್ಯಾಸವು,

17) ವರ್ಗಸಮೀಕರಣದ ಮೂಲಗಳನ್ನು ಕಂಡುಹಿಡಿಯುವ ಸೂತ್ರವು,

18) ಎರಡು ಸರಳ ರೇಖೆಗಳು ಸಮಾಂತರವಾಗಿದ್ದರೆ ಹೊಂದಿದ್ದರೆ, ಅವು ಎಷ್ಟು ಪರಿಹಾರಗಳನ್ನು ಹೊಂದಿವೆ?

19) ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣಗಳ ಅನುಪಾತವು 9 : 4 ಆದರೆ, ಅವುಗಳ ಅನುರೂಪ ಬಾಹುಗಳ ಅನುಪಾತವು,

20) ಒಂದು ವರ್ಗಸಮೀಕರಣದ ಮೂಲಗಳು ವಾಸ್ತವ ಮತ್ತು ಸಮ ಇದ್ದರೆ, ಶೋಧಕವು,

ಉತ್ತರಕ್ಕಾಗಿ ನಿರೀಕ್ಷಿಸಿ

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)


ಸಾಯಿಮಣಿ ಪ್ರಕಾಶನ, ಹೊಸಪೇಟೆ

**2025 ಕ್ಯಾಲೆಂಡರ್**
ನಿಮ್ಮ ಅಥವಾ ನಿಮ್ಮ ಮಕ್ಕಳ ಫೋಟೋದೊಂದಿಗೆ ಹೊಸ ವರ್ಷದ ಕ್ಯಾಲೆಂಡರ್ ಜೊತೆ ಶುಭಾಶಯಗಳನ್ನು ಕೋರಲು ಇಚ್ಛಿಸುವವರು ಸಂಪರ್ಕಿಸಿ
ಮೊ: 9448633038

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**25–12–2024 – ಬುಧವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಅತಿಗಂಡ |
| ಕರಣ | : ವಾಣಿಜ |
| ಸೂರ್ಯೋದಯ | : 07:07:00 |
| ಸೂರ್ಯಾಸ್ತ | : 17:47:29 |
| ರಾಹು ಕಾಲ | : 12:27–13:47 |
| ಯಮಘಂಡ ಕಾಲ | : 08:27–09:47 |
| ಗುಳಿಕ ಕಾಲ | : 11:07–12:27 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 24–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.00 ಅಡಿ |
| ಒಳ ಹರಿವು | 545 ಕ್ಯುಸೆಕ್ |
| ಹೊರ ಹರಿವು | 7386 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 86.731 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1589.54 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 870 ಕ್ಯುಸೆಕ್ |
| ಸಾಮರ್ಥ್ಯ | 10.654 ಟಿಎಂಸಿ |

# ಘನತೆಯ ಬದುಕಿಗೆ ಮಾನವ ಹಕ್ಕುಗಳ ಅರಿವು ಅತ್ಯಗತ್ಯ

### ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ ಹೇಳಿಕೆ । ಮಾನವ ಹಕ್ಕುಗಳ ದಿನಾಚರಣೆ



**■ ಹಂಪಿ ಟೈಮ್ಸ್ ಹೊಸಪೇಟೆ**

ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಮಾನವ ಹಕ್ಕುಗಳನ್ನು ಜಾರಿಗೆ ತಂದು ದಿನಾಚರಣೆಯ ಮೂಲಕ ಅರಿವು ಮೂಡಿಸುವ ಕಾರ್ಯ ನಡೆಸಲಾಗುತ್ತಿದೆ ಎಂದು ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸೇರಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ಮಾನವ ಹಕ್ಕುಗಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು, ಬದುಕುವ ಹಕ್ಕು ಎಲ್ಲರಿಗೂ ಇದೆ. ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ವಸತಿ, ಆಹಾರ ಹಾಗೂ ಬಟ್ಟೆ. ಇವುಗಳಿಲ್ಲದೆ ಮನುಷ್ಯನ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಈ ಮೂಲ ಸವಲತ್ತುಗಳನ್ನು ಪಡೆಯುವುದು ಪ್ರತಿಯೊಬ್ಬ ಪ್ರಜೆಯ ಜನ್ಮಸಿದ್ಧ ಹಕ್ಕಾಗಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಮನುಷ್ಯನ ಈ ಮೂಲಭೂತ ಹಕ್ಕುಗಳನ್ನು ಧಮನಿಸುವ ಪ್ರಯತ್ನಗಳೇ ನಡೆಯುತ್ತಿವೆ. ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಇತರರ ಬದುಕಿನ ಹಕ್ಕನ್ನು ಕಸಿಯುವುದು, ಅವರಿಗೆ ಹಿಂಸೆ ನೀಡುವುದು ಇತ್ಯಾದಿ ಇದರ ವ್ಯಾಪ್ತಿಯೊಳಗೆ ಬರುತ್ತವೆ. ಯಾವುದೇ ಧರ್ಮ, ಜಾತಿ, ಲಿಂಗ, ಜನಾಂಗ, ಬಣ್ಣ, ಭಾಷೆ, ರಾಜಕೀಯ ಅಥವಾ ಇತರೆ ಅಭಿಪ್ರಾಯಗಳು, ಸ್ಥಾನಮಾನವನ್ನು ಲೆಕ್ಕಿಸದೆ ಎಲ್ಲಾ ಮಾನವರು ಸಮಾನರು. ಎಲ್ಲರೂ ಸಂಪೂರ್ಣ ಹಕ್ಕನ್ನು ಹೊಂದಿದ್ದಾರೆ ಎಂಬುದನ್ನು ಸೂಚಿಸುವುದು ಮಾನವ ಹಕ್ಕುಗಳ ಮೂಲ ಉದ್ದೇಶವಾಗಿದೆ. ವ್ಯಕ್ತಿಯ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಗೆ ಸಂಬಂಧಿಸಿದ ಹಕ್ಕುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತದೆ. ಜೀವಿಸುವ ಹಕ್ಕು ಸೇರಿ ವಾಕ್ ಸ್ವಾತಂತ್ರ್ಯ, ಆಹಾರ, ಶಿಕ್ಷಣ, ಸಾಮಾಜಿಕ ಭದ್ರತೆ, ಸಂಘಟನೆ, ರಾಷ್ಟ್ರೀಯತೆ, ರಕ್ಷಣೆ, ಆರೋಗ್ಯ, ಧಾರ್ಮಿಕ ಸ್ವಾತಂತ್ರ್ಯದ ಜತೆಗೆ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಜ್ಞಾನ ಮಾನವ ಹಕ್ಕುಗಳಿಂದ ಮಾತ್ರ ತಿಳಿಯಬಹುದಾಗಿದೆ ಎಂದರು.

ಈ ವೇಳೆ ಸಿವಿಲ್ ನ್ಯಾಯಧೀಶ ಪ್ರಶಾಂತ್ ನಾಗಲಾಪುರ್, ಜಿಲ್ಲಾ ಕಾರ್ಮಿಕಾಧಿಕಾರಿ ಸೂರಪ್ಪ ಡೊಂಬರಮತ್ತೂರು, ತಹಸೀಲ್ದಾರ ಶೃತಿ.ಎಂ. ಮಳ್ಳಪ್ಪಗೌಡ್ರ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸ ಮೂರ್ತಿ, ಶಿಶು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನಾಧಿಕಾರಿ ಸಿಂಧು ಅಂಗಡಿ, ಅಹಾರ ಶಿರಸ್ತೇದಾರ ಜಿ.ಹೆಚ್.ರುದ್ರಪ್ಪ, ಕಾರ್ಮಿಕ ನಿರೀಕ್ಷಕರಾದ ಶಿವಶಂಕರ.ಬಿ.ತಳವಾರ, ಗೋಪಾಲ್.ಬಿ.ಧೂಪದ, ಕಿರಾಣಿ ವರ್ತಕರ ಸಂಘದ ಅಧ್ಯಕ್ಷ ಮುಗದ ನಾಗರಾಜ ಇತರರಿದ್ದರು. ವಕೀಲರಾದ ಕಲೀಂಸಾಹೇಬ್ ನಿರ್ವಹಿಸಿದರು.

# ಮೀಸಲಾತಿ ಕಾಯ್ದೆ ಜಾರಿ ನಂತರ ತಾಪಂ ಜಿಪಂ ಚುನಾವಣೆ ನಡೆಸಲು ಆಗ್ರಹ

**■ ಹಂಪಿ ಟೈಮ್ಸ್ ಹೊಸಪೇಟೆ**

ರಾಜಕೀಯವಾಗಿ ಹಿಂದುಳಿದ ಹಾಗೂ ಅತೀ ಹಿಂದುಳಿದ ಜಾತಿಗಳಿಗೆ ಪ್ರತಿಶತ 33%ರಷ್ಟು ಸ್ಥಾನ ಮೀಸಲಾತಿ ಕಾಯ್ದೆ ಜಾರಿಗೊಳಿಸಿದ ನಂತರವೇ ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸ ಬೇಕೆಂದು ಒತ್ತಾಯಿಸಿ ವಿಜಯನಗರ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟವು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮಂಗಳ ವಾರ ಮನವಿ ಸಲ್ಲಿಸಿತು.

ಒಕ್ಕೂಟದ ಪದಾಧಿಕಾರಿಗಳಾದ ಯು. ಆಂಜನೇಯಲು, ಪ್ರೊ.ಉಮಾಮಹೇಶ್ವರ್, ಪಂಪಣ್ಣ, ವೆಂಕೋಬಪ್ಪ, ಈ.ಕುಮಾರಸ್ವಾಮಿ, ಈ.ರಾಘವೇಂದ್ರ, ಸಣ್ಣಮಾರೆಪ್ಪ, ಪರಮೇಶ್, ಕೆ.ಶ್ರೀನಿವಾಸ್, ಎಂ.ಕೆ.ಬಾಷ, ಕೆ.ತಿಪ್ಪೇಸ್ವಾಮಿ ಇತರರಿದ್ದರು.



# ವಿದ್ಯಾರ್ಥಿಗಳಲ್ಲಿ ಸಂಸ್ಕಾರವಿದ್ದಲ್ಲಿ ಯಶಸ್ಸು ಗಳಿಕೆ ಸುಲಭ

### ಉಪನ್ಯಾಸಕ ಬಿ.ಎಚ್.ಎಂ.ಗುರುಬಸವರಾಜ ಹೇಳಿಕೆ



**■ ಹಂಪಿ ಟೈಮ್ಸ್ ಹೊಸಪೇಟೆ**

ಶಿಕ್ಷಕರು ಹಾಗೂ ಪಾಲಕರು ತಿಳಿಸುವ ಸಂಸ್ಕಾರವನ್ನು ಮಕ್ಕಳು ರೂಢಿಸಿಕೊಂಡರೆ ಜೀವನದಲ್ಲಿ ಯಶಸ್ಸು ಸುಲಭವಾಗಿ ಸಾಧಿಸಬಹುದು ಎಂದು ಹೂವಿನ ಹಡಗಲಿ ಬಾಲಕಿಯರ ಸ.ಪ.ಪೂ.ಕಾಲೇಜಿನ ಉಪನ್ಯಾಸಕ ಬಿ.ಎಚ್.ಎಂ.ಗುರುಬಸವರಾಜ ಹೇಳಿದರು.

ತಾಲೂಕಿನ ಮಲಪನಗುಡಿ ಗ್ರಾಮದಲ್ಲಿ ವಿಜಯನಗರ ಪದವಿಪೂರ್ವ ಮಹಾವಿದ್ಯಾಲಯದಿಂದ ಹಮ್ಮಿಕೊಂಡಿರುವ ಎನ್‌ಎಸ್‌ಎಸ್ ಶಿಬಿರದ ಎರಡನೇ ದಿನ ಮಂಗಳವಾರ ವಿದ್ಯಾರ್ಥಿಗಳು ಮತ್ತು ಸಂಸ್ಕಾರ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಗುರು ಹಿರಿಯರನ್ನು ಗೌರವಿಸುವುದು, ಉತ್ತಮ ಸಂದೇಶಗಳನ್ನು ಆಲಿಸುವುದು, ಉತ್ತಮ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಸಂಸ್ಕಾರಯುತ ಜನರ ನಡುವೆ ನಿರಂತರ ಉತ್ತಮ ಸಂಪರ್ಕವಿದ್ದರೆ ಉತ್ತಮ ನಾಗರೀಕರಾಗಿ ಬೆಳೆಯಲು ಸಾಧ್ಯ ಎಂದರು.

ಶಿಬಿರದ ಯೋಜನಾಧಿಕಾರಿ ಕೆ.ಶರಣಬಸವ ಹಸಮಕಲ್ ಮಾತನಾಡಿ, ನಮಸ್ಕಾರ ಹೇಳುವುದನ್ನು ರೂಢಿಸಿಕೊಳ್ಳಬೇಕು. ವ್ಯಕ್ತಿಗಳು ಹೇಳುವ ಪ್ರತಿ ನಮಸ್ಕಾರಗಳು ಸಂಸ್ಕಾರವನ್ನು ತೋರುತ್ತವೆ. ಇಂದು ನಮಸ್ಕಾರ ಎಂಬುದು ಮರೆಯಾಗುತ್ತಿರುವುದು ವಿಷಾದನೀಯ. ಒಂದು ನಮಸ್ಕಾರ ಅನೇಕರ ನಡುವೆ ಉತ್ತಮ ಸಂಪರ್ಕ ಕಲ್ಪಿಸಬಲ್ಲದು. ಹಸಿವಾದಗ ಉಂಡರೆ ಅದು ಆರೋಗ್ಯಕರ, ಹಸಿವಿಲ್ಲದಿದ್ದರೂ ಸದಾ ತಿನ್ನುವುದಲ್ಲೆ ತೊಡಗಿಸಿಕೊಳ್ಳವುದು ಆರೋಗ್ಯಕ್ಕೆ ಒಳ್ಳೆಯದಲ್ಲ. ಭಾರತೀಯ ಸಂಸ್ಕೃತಿ ಯನ್ನು ಪ್ರತಿಯೊಬ್ಬರು ಅರಿಯಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಕೆ.ಮಲ್ಲಿಕಾರ್ಜುನಗೌಡ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲೆ ಸಂಸ್ಕಾರ ಬೆಳೆಸಿಕೊಳ್ಳಬೇಕು. ನಮ್ಮ ನಡೆ ನುಡಿ ಗಳಲ್ಲಿ ಸಂಸ್ಕಾರ ಕಾಣಬೇಕು. ಸಂಸ್ಕಾರ ನಿತ್ಯ ಬೆಳಿಗ್ಗೆ ಏಳುವುದರಿಂದ ಆರಂಭಗೊಳ್ಳಬೇಕು. ಪ್ರತಿಯೊಬ್ಬರನ್ನು ಗೌರವದಿಂದ ಕಾಣಬೇಕು. ಇತರರನ್ನು ಏಕವಚನದಲ್ಲಿ ಮಾತನಾಡಿಸಬಾರದು ಎಂದರು. ಶಿಬಿರಾರ್ಥಿಗಳು ಇದ್ದರು. ಶಿಬಿರಾರ್ಥಿ ಗೌರಮ್ಮ ನಿರ್ವಹಿಸಿದರು.

# ಅಕ್ಷರ ಕ್ರಾಂತಿಯಿಂದ ಅಸ್ಪೃಶ್ಯತೆ ನಿವಾರಣೆ

### ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಅಧೀಕ್ಷಕ ಎಸ್. ಪಕ್ಕೀರಪ್ಪ ಹೇಳಿಕೆ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ಅಕ್ಷರ ಕ್ರಾಂತಿಯಿಂದ ಮಾತ್ರ ಅಸ್ಪೃಶ್ಯತೆ ನಿವಾರಣೆ ಸಾಧ್ಯ ಎಂದು ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಅಧೀಕ್ಷಕ ಎಸ್. ಪಕ್ಕೀರಪ್ಪ ಹೇಳಿದರು.

ತಾಲ್ಲೂಕಿನ ಬಣವಿಕಲ್ಲು ಗ್ರಾಮದಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಖೆ, ಪೊಲೀಸ್ ಇಲಾಖೆಯ ಸಹಯೋಗ ದಲ್ಲಿ ಹಮ್ಮಿಕೊಂಡಿದ್ದ ಅಸ್ಪೃಶ್ಯತೆ ನಿವಾರಣಾ ಸಪ್ತಾಹದ ಅಂಗವಾಗಿ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಅಸ್ಪೃಶ್ಯತೆ ಹೋಗ ಲಾಡಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸಮಾಜಿಕ ಬದಲಾವಣೆ ಮೂಲಕ ಈ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಶಿಕ್ಷಣವಂತರಾಗಬೇಕು. ಸಮಾಜದ ಎಲ್ಲಾ ವರ್ಗದವರು ಶಿಕ್ಷಣದಿಂದ ಅರಿವು ತಂದುಕೊಂಡರೆ ಸಮಾನತೆಯ ಸಮಾಜ ಸ್ಥಾಪಿಸುವುದರೊಂದಿಗೆ ಅಸ್ಪೃಶ್ಯತೆ ಯನ್ನು ನಿವಾರಿಸಬಹುದು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಶೋಷಿತ ಸಮಾಜದ ಧ್ವನಿಯಾಗಿದ್ದರು. ಜಾತಿ ಪದ್ಧತಿ ವಿರುದ್ಧ 12ನೇ ಶತಮಾನದಲ್ಲಿ ಬಸವಣ್ಣನ ವರು ಕ್ರಾಂತಿ ಮಾಡಿದರು ಹಾಗೂ ಮಹಿಳೆ ಯರಿಗೆ ಸಮಾನತೆ ನೀಡಬೇಕು ಎಂದಿದ್ದರು. ಸಾಮಾಜಿಕ ಅಸಮತೋಲನ ಹೋಗಲಾಡಿ ಸಬೇಕಾಗಿದೆ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶಾಹೀಖಾ ಅಹ್ಮದಿ, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಭಾಗ್ಯಮ್ಮ ಲೋಕೇಶ್, ಉಪಾಧ್ಯಕ್ಷೆ ಪೂರ್ಣಿಮಾ ಪ್ರಶಾಂತ, ಡಾ. ಬಿ.ಆರ್. ಅಂಬೇಡ್ಕರ್ ಸಂಘದ ತಾಲ್ಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ, ಡಿಎಸ್‌ಎಸ್ ಮುಖಂಡ ಬಿ. ರಾಘವೇಂದ್ರ, ಉಪ ತಹಶೀಲ್ದಾರ್ ಚಂದ್ರಮೋಹನ್, ಶಿಕ್ಷಕಿ ಗೀತಾ ಭಾಪ್ರಿ ಪಾಲ್ಗೊಂಡಿದ್ದರು.

# ಪಂಚ ಗ್ಯಾರಂಟಿ ಸಾಮಾನ್ಯ ಜನರಿಗೆ ವರದಾನ



**■ ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಮಹತ್ವ ಪೂರ್ಣ ಪಂಚಗ್ಯಾರಂಟಿ ಯೋಜನೆಗಳಿಂದ ಸಾಮಾನ್ಯ ಮತ್ತು ಅಸಹಾಯಕ ಕುಟುಂಬ ಗಳಿಗೆ ವರದಾನವಾಗಿದ್ದು, ಜಿಲ್ಲೆಯಲ್ಲಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಮೂಲಕ ಶೇ.100 ರಷ್ಟು ಪ್ರಗತಿ ಸಾಧಿಸಿ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಜಿಲ್ಲಾ ಅಧ್ಯಕ್ಷ ಚಿದಾನಂದಪ್ಪ. ಕೆ.ಇ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನಷ್ಠಾನ ಪ್ರಾಧಿಕಾರದಿಂದ ಮಂಗಳವಾರ ಆಯೋಜಿಸಿದ್ದ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಂದ ಹೊರಗುಳಿದ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಗ್ಯಾರಂಟಿ ಯೋಜನೆಗಳ ಲಾಭ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಶೇ.100ರಷ್ಟು ಪ್ರಗತಿ ಸಾಧಿಸಲು ಕ್ರಮವಹಿಸುವ ಮೂಲಕ ರಾಜ್ಯದಲ್ಲಿಯೇ ಮೊದಲ ಸ್ಥಾನ ತಲುಪಬೇಕು ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿ ಯಾದ ಫಲಾನುಭವಿಗಳಿಗೆ ಆಗಸ್ಟ್ 2023 ರಿಂದ ಸೆಪ್ಟಂಬರ್ 2024 ರವರೆಗೆ ರೂ.2,000 ರಂತೆ ಸರ್ಕಾರದಿಂದ ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಅವರು ಸಭೆಗೆ ತಿಳಿಸಿದರು.

ಇದಕ್ಕೆ ಅಧ್ಯಕ್ಷರು ಮಾತನಾಡಿ, ವಿವಿಧ ಕಾರಣಗಳಿಂದ ಫಲಾನುಭವಿಗಳಿಗೆ ಹಣ ಪಾವತಿಯಾಗದಿರುವ ಕುರಿತು ನನ್ನ ಕಚೇರಿಗೆ ಅರ್ಜಿ ಬರುತ್ತಿವೆ, ಇದಕ್ಕೆ ಏನು ಪರಿಹಾರ ಎಂದು ಪ್ರಶ್ನಿಸಿದರು. ವಿಜಯ್ ಕುಮಾರ್ ಅವರು ಪ್ರತಿಕ್ರಿಯಿಸಿದರು.

ಅನ್ನಭಾಗ್ಯ, ಗೃಹಜ್ಯೋತಿ, ಶಕ್ತಿ ಯೋಜನೆ, ಯುವ ನಿಧಿ ಪ್ರಗತಿ ಕುರಿತು ಅಧಿಕಾರಿಗಳು ವರದಿ ಒಪ್ಪಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಸದಸ್ಯರಾದ ಕರಿಬಸಪ್ಪ, ಆಶಾ ಲತಾ ಸೋಮಪ್ಪ, ಗೋನಾಳ್ ನಾಗಭೂಷಣ ಗೌಡ, ನಾಗೇನಹಳ್ಳಿ ಮಲ್ಲಿಕಾರ್ಜುನ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಪಂ ಯೋಜನಾಧಿಕಾರಿ ಪ್ರಮೋದ್, ಆಹಾರ ಇಲಾಖೆಯ ಉಪನಿರ್ದೇಶಕರಾದ ಸಕೀನಾ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಹಟ್ಟಪ್ಪ ಸೇರಿದಂತೆ ಇತರೆ ಗ್ಯಾರಂಟಿ ಯೋಜನೆಗಳ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

